ವಿಷಯ: (ಅ) ನಾಗಮಂಗಲ ತಾಲ್ಲೂಕಿನ ಕಾಳಿಂಗನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕತ್ರಿಗುಪ್ಪೆ, ಕಾಡು ಅಂಕನಹಳ್ಳಿ, ದೊಡ್ಡಗುಣಿ ಹಾಗೂ ಕಾಡುಮಂಚೇನಹಳ್ಳಿ ಗ್ರಾಮಗಳ ಜಮೀನು ಖರೀದಿಯಲ್ಲಿ ನಡೆದಿರುವ ಅವ್ಯವಹಾರ.

ಶ್ರೀ ಎನ್.ಚಲುವರಾಯಸ್ವಾಮಿ(ನಾಗಮಂಗಲ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಒಂದು ದೊಡ್ಡ ಪ್ರಮಾಣದಲ್ಲಿ ಭೂಹಗರಣ ನಡೆದಿದೆ. ನಾನು ಈಗಾಗಲೇ ಪತ್ರದ ಮೂಲಕ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದೇನೆ. ಜಿಲ್ಲಾಧಿಕಾರಿಗಳಿಗೆ, ಸಂಬಂಧಪಟ್ಟ ಸಚಿವರಿಗೆ, ಅರಣ್ಯ ಸಚಿವರಿಗೆ, ರೆವಿನ್ಯೂ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರವನ್ನು ಸಲ್ಲಿಸಿದ್ದೇನೆ. ಅದರ ಜೊತೆಗೆ ಇದಕ್ಕಿಂತ ಮೊದಲು ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರಿಗೂ ಸಹ ಈ ರೀತಿ ಭೂಮಿಯನ್ನು ನಮ್ಮ ತಾಲ್ಲೂಕಿನ ಒಬ್ಬ ಪ್ರಭಾವಿ ವ್ಯಕ್ತಿ 200 ರಿಂದ 300 ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆಂದು ಪತ್ರವನ್ನು ಬರೆದಿದ್ದಾರೆ.

ಅಧ್ಯಕ್ಷರು: ಅವರು ಉತ್ತರ ಹೇಳಿದ ನಂತರ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎನ್.ಚಲುವರಾಯಸ್ವಾಮಿ: ನಾಗಮಂಗಲ ತಾಲ್ಲೂಕಿನ ಕಾಳಿಂಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕಾಡುಮಂಚೇನಹಳ್ಳಿ, ಹಾಲಾಳು ಮತ್ತು ಅದೇ ಪಂಚಾಯಿತಿ ವ್ಯಾಪ್ತಿಗೆ ಬರುವ ಕತ್ರಿಗುಪ್ಪೆ, ಕಾಡುಅಂಕನಹಳ್ಳಿ ಎಂಬ ಎರಡು ಗ್ರಾಮಗಳಲ್ಲಿ ಲಕ್ಷ್ಮಮ್ಮ ಕೋಂ ಲೇಟ್ ಪಟೇಲ್ ರಾಮೇಗೌಡ, ಲಕ್ಷ್ಮಮ್ಮ ಉ: ತಾಯಮ್ಮ, ಕೋಂ ಕೋಡಿಗೌಡ, ಶ್ರೀಮತಿ ಸುಧಾ ಕೋಂ ಎಲ್.ಆರ್.ಶಿವರಾಮೇಗೌಡ ಈ ಮೂರು ಜನರ ಹೆಸರಿನಲ್ಲಿ ಖರೀದಿ ಮಾಡಿರುವಂತಹ ಒಂದು ಕಡೆ 50 ಎಕರೆ, ಮತ್ತೊಂದು ಕಡೆ 75 ಎಕರೆ ಒತ್ತುವರಿ ಜಮೀನನ್ನು ಮಾಡಿಕೊಂಡಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ತಾವು ಏನು ಕ್ರಮವನ್ನು ಕೈಗೊಂಡಿದ್ದೀರಿ? ಎಂಬ ಬಗ್ಗೆ ತಮ್ಮ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಾಗಮಂಗಲ ತಾಲ್ಲೂಕು ಕತ್ರಿಗುಪ್ಪೆ ಗ್ರಾಮದ ಸ.ನಂ. 40, 19(A), 19(B), 19/1, 19/2, 19/3, 19/4, 19/5, 19/9, 19/7.33. 38, 41, ಕಾಡು ಅಂಕನಹಳ್ಳಿ ಗ್ರಾಮದ ಸ.ನಂ.101(A), 116, 121, 132, 134, 117, 120, 123, 101, 118, 119 ಹಾಗೂ ದೊಡ್ಡಗುಣಿ ಗ್ರಾಮದ ಸ.ನಂ.91ರಲ್ಲಿ ಸುಮಾರು 75 ಎಕರೆ ಜಮೀನಿನ ಖರೀದಿಯಲ್ಲಿ ಮೋಸ ವಂಚನೆ ನಡೆದ ಬಗ್ಗೆ ಹಾಗೂ ಹಾಲಾಳು ಗ್ರಾಮದ ಸ.ನಂ.22ರ ಸುತ್ತಮುತ್ತ ಇರುವ ಗೋಮಾಳ:ಅರಣ್ಯ ಭೂಮಿಯ ಒತ್ತುವರಿ ಬಗ್ಗೆ

ಗಮನ ಸೆಳೆಯಲಾಗಿದೆ.

ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿರುವ ಈ ಮಾಹಿತಿ ಬಗ್ಗೆ ಕೂಲಂಕಷ ಪರಿಶೀಲನೆ ಮಾಡಿ ಶೀಘ್ರವಾಗಿ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದೆ. ಕತ್ರಿಗುಪ್ಪೆ, ಕಾಡು ಅಂಕನಹಳ್ಳಿ, ದೊಡ್ಡಗುಣಿ ಗ್ರಾಮದ ಖಾಸಗಿ ಜಮೀನುಗಳ ವ್ಯವಹಾರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961, ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ, 1969ರ ಉಲ್ಲಂಘನೆ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಯಾವುದೇ ಉಲ್ಲಂಘನೆ ಕಂಡು ಬಂದಲ್ಲಿ ನಿಯಮಾವಳಿಯಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಹಾಲಾಳು ಗ್ರಾಮದಲ್ಲಿನ ಗೋಮಾಳ ಒತ್ತುವರಿ ಬಗ್ಗೆ ಪರಿಶೀಲಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ, 94A, 94B ವ್ಯಾಪ್ತಿಯಲ್ಲಿ ಬರದಿದ್ದಲ್ಲಿ ಒತ್ತುವರಿದಾರರನ್ನು ಖುಲ್ಲಾ ಪಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಈ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಒಂದು ವಿಷಯವನ್ನು ಸಚಿವರು ಮನಗಾಣಬೇಕಾಗಿದೆ. ಇದರ ಹಿನ್ನೆಲೆ ಎಂದರೆ, ಒಬ್ಬ ಪ್ರಭಾವಿ ವ್ಯಕ್ತಿ ಹಿಂದೆ ಇದನ್ನು ಒತ್ತುವರಿ ಮಾಡಿಕೊಳ್ಳಬೇಕಾದರೆ ಅಧಿಕಾರದಲ್ಲಿದ್ದಾಗ ಖರೀದಿ ಮಾಡಿರತಕ್ಕಂತಹ 75 ಎಕರೆಯನ್ನು ಸಹ ಬೇರೆಯವರ ಹೆಸರಿನಲ್ಲಿ ಮಂಜೂರು ಮಾಡಿ ಅವರಿಂದ ಇವರ ಹೆಸರಿಗೆ ಖರೀದಿ ಮಾಡಿಕೊಂಡಿರುವುದರಲ್ಲಿ ಅವ್ಯವಹಾರ ನಡೆದಿದೆ. 50 ಎಕರೆಯನ್ನು ಖರೀದಿ ಮಾಡಿ ಪಕ್ಕದಲ್ಲಿ 100 ಎಕರೆಯನ್ನು ಒತ್ತುವರಿ ಮಾಡಿಕೊಂಡಿರುವುದು, ಈ ಒತ್ತುವರಿಗೆ ಬೇಲಿಯನ್ನು ಹಾಕಿಸಬೇಕಾದರೆ ಫಾರೆಸ್ಟ್ ಇಲಾಖೆಯು ಇದರಲ್ಲಿ ಶಾಮೀಲಾಗಿದೆ, ರೆವಿನ್ಯೂ ಇಲಾಖೆ, ನೀರಾವರಿ ಇಲಾಖೆ, ಇದರಲ್ಲಿ ಶಾಮೀಲಾಗಿದೆ. ಸರ್ಕಾರದ ಅಧಿಕಾರಿಗಳೆಲ್ಲರೂ ಸೇರಿ ಈ ರೀತಿಯಾದಂತಹ ಒತ್ತುವರಿಯನ್ನು ಅವರಿಗೆ ಕ್ರಮಬದ್ಧವಾಗಿ ಮಟ್ಟ ಮಾಡಿ ಬೇಲಿ ಹಾಕಿ, ಸಸಿಯನ್ನು ನೆಡೆಸತಕ್ಕಂತಹ ದೊಡ್ಡ ಕಾರ್ಯವನ್ನು ಇವರು ಮಾಡಿದ್ದಾರೆ. ಇದನ್ನು ಖಾಲಿ ಮಾಡಿಸುವುದಷ್ಟೇ ಅಲ್ಲ, ಸ್ಪಷ್ಟವಾದ ದಿನಾಂಕವನ್ನು ಸಚಿವರು ಹೇಳಬೇಕು. ಎಷ್ಟು ದಿವಸಗಳಲ್ಲಿ ಖಾಲಿ ಮಾಡಿಸುತ್ತೀರಿ? ಜೊತೆಗೆ ಒತ್ತುವರಿ ಮಾಡಿಕೊಂಡವರ ಮೇಲೆ, ಅದಕ್ಕೆ ಷಾಮೀಲಾಗಿರತಕ್ಕ ಅಧಿಕಾರಿಗಳ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಬಹಳ

ಅನ್ಯಾಯವಾಗುತ್ತದೆ. ಕಾರ್ಮಿಕ ಸಚಿವರು ಸದನದಲ್ಲಿದ್ದಾರೆ, ಆ ಜಮೀನಿನಲ್ಲಿ ಡಿಸ್ಟಿಲರೀಸ್ ತೆಗೆಯುವುದಕ್ಕೆ ಪಲ್ಯೂಷನ್ ಕಂಟ್ರೋಲ್ ಬೋರ್ಡ್‌ನ ಅನುಮತಿ ಪಡೆದಿಲ್ಲ. ಇಂಡಸ್ಟ್ರಿಯಲ್ ಇಲಾಖೆಯ ಅನುಮತಿಯನ್ನು ಸರಿಯಾದ ರೀತಿಯಲ್ಲಿ ಪಡೆದಿಲ್ಲ. ಅನುಮತಿಯನ್ನು ಪಡೆಯದೆ ಡಿಸ್ಟಿಲರಿಯನ್ನು ತೆಗೆಯುತ್ತಿದ್ದಾರೆ. ಇದರ ಬಗ್ಗೆ ಸಾರ್ವಜನಿಕರು ಪಲ್ಯೂಷನ್ ಬೋರ್ಡ್‌ಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಅಲ್ಲೊಂದು ನದಿ ಹರಿಯುತ್ತಿದೆ, ಮಾರ್ಕೋನಹಳ್ಳಿ ಅಣೆಕಟ್ಟಿಗೆ ಅಲ್ಲಿಂದ ನೀರು ಹರಿದು ಬರುತ್ತಿದೆ. ಈ ತರಹ ಅವ್ಯವಹಾರ ನಡೆಯುತ್ತಿರುವುದರಿಂದ ಅದಕ್ಕೆ ಅವಕಾಶ ಕೊಡದೆ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಕ್ರಮ ತೆಗೆದುಕೊಳ್ಳಬೇಕು ಇದು ಪ್ರಮುಖವಾದ ವಿಚಾರ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೆ, ನಿಯಮವನ್ನು ಉಲ್ಲಂಘನೆ ಮಾಡಿ ಯಾರೇ ಅತಿಕ್ರಮ ಮಾಡಿದ್ದರೂ ಸಹ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಅದನ್ನು ಖಿಲ್ಲಾ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್.ಚಲುವರಾಯಸ್ವಾಮಿ: ಅವರ ಮೇಲೆ ನೀವು ಯಾವಾಗ ಕ್ರಿಮಿನಲ್ ಕೇಸ್ ಹಾಕುತ್ತೀರಿ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಎಲ್ಲಾ ಇಲಾಖೆಗಳವರು ಸೇರಿಕೊಂಡಿದ್ದಾರೆ, ಇದರಲ್ಲಿ ಷಾಮೀಲಾಗಿದ್ದಾರೆ, ಆ ಇಲಾಖೆ, ಈ ಇಲಾಖೆಯೆಂದು ಬಹಳ ಉದ್ದವಾದ ಪಟ್ಟಿಯನ್ನೇ ಹೇಳಿದ್ದೀರಿ. ಆದಷ್ಟು ಶೀಘ್ರವಾಗಿ ಅದನ್ನು ತೆರವು ಗೊಳಿಸುತ್ತೇನೆ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಯಾರಾದರೂ ಬಡವರು, ಸಾಮಾನ್ಯ ಜನರು, ಪರಿಶಿಷ್ಟ ಜಾತಿಯವರು ಜಮೀನನ್ನು ಅತಿಕ್ರಮ ಮಾಡಿದ್ದರೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತದೆ. ಆದರೆ ರಾಜಕೀಯದಲ್ಲಿರುವಂತಹ ನಿಪುಣರು, ನೆಲಗಳ್ಳರು ಯಾರಿದ್ದಾರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿದರೂ ಕೂಡ ಮಾನ್ಯ ಮಂತ್ರಿಗಳು ವರದಿ ಬಂದಿದೆ, ನಾನು ನೋಡುತ್ತೇನೆ, ಹೇಳುತ್ತೇನೆಂದು ಹೇಳುತ್ತಿದ್ದಾರೆ. ಒಳ್ಳೆಯ ಮಂತ್ರಿಗಳು, ಉತ್ತಮವಾದ ಕೆಲಸವನ್ನು ಮಾಡುವಂತಹ ಸಚಿವರಿದ್ದಾರೆ. ದಯವಿಟ್ಟು ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು: ಮಂತ್ರಿಗಳು ರಿಪೋರ್ಟ್ ತರಿಸಿಕೊಳ್ಳುವುದು ಬೇಡವೆ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಒತ್ತುವರಿ

ಆಗಿರುವುದು ಗೊತ್ತಿದೆ. ಅವರು ನಿಖರವಾದ ದಿನಾಂಕವನ್ನು ಹೇಳುತ್ತಿಲ್ಲ. ಒತ್ತುವರಿ ಮಾಡಿಕೊಂಡು ಅಲ್ಲಿ ತೆಂಗಿನಗಿಡ ಹಾಕಿದ್ದಾರೆಂದರೆ ಅದು ಗೊತ್ತಾಗುವುದಿಲ್ಲವೆ?

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):ಮಾನ್ಯ ಅಧ್ಯಕ್ಷರೆ, ಇದು ಏನಾಗುತ್ತದೆಂದರೆ, ಮಾನ್ಯ ಸದಸ್ಯರು ಇಷ್ಟೊಂದು ಗಮನ ಸೆಳೆದಿದ್ದಾರೆ,ಸರ್ಕಾರದ ಕಡೆಗೆ ಪ್ರೈಮಾಫೇಸಿ ಎವಿಡೆನ್ಸ್ ಇರುತ್ತದೆ. ಅಲ್ಲಿ ಒತ್ತುವರಿ ಆಗಿದೆಯೇ, ಇಲ್ಲವೇ ಎನ್ನುವುದು ಎಲ್ಲಾ ಅಧಿಕಾರಿಗಳಿಗೂ ಗುರುತು ಇರುತ್ತದೆ. ಅಸೆಂಬ್ಲಿಯಲ್ಲಿ ಈ ವಿಚಾರ ಪ್ರಸ್ತಾಪವಾದಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ಇದನ್ನು ಗಂಭೀರವಾಗಿ ತೆಗೆದುಕೊಂಡು ಒತ್ತುವರಿಯನ್ನು ನಿಕಾಲ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ವರದಿ ತರಿಸಿಕೊಳ್ಳುವುದು ಅದು ಬೇರೆ. ಇವೆಲ್ಲ ಮೇಲ್ನೋಟಕ್ಕೆ ಕಂಡುಬರುವಂತಹದ್ದು. ಇದರಲ್ಲಿ ರಾಜಕೀಯ ಶಕ್ತಿಗಳು ಇರುತ್ತವೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸರ್ಕಾರದ ಗಮನ ಸೆಳೆದಿದ್ದಾರೆ. ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. ಅದರ ಬಗ್ಗೆ ಶೀಘ್ರವಾಗಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಭರವಸೆಯನ್ನು ಸಹ ಕೊಟ್ಟಿದ್ದೇನೆ.

ಅಧ್ಯಕ್ಷರು: ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆಂದು ಮಂತ್ರಿಗಳು ಹೇಳಿದ್ದಾರೆ, ಇದಕ್ಕಿಂತ ಉತ್ತರ ಬೇಕಾ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಅವಕಾಶ ಕೊಡಿ. ಗಮನ ಸೆಳೆದಿರುವುದನ್ನು ಇಷ್ಟು ಸಾಧಾರಣವಾಗಿ ತೆಗೆದುಕೊಳ್ಳಬಾರದು.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಆಯಿತು ಬಿಡಿ ಅಂದರೆ, ನಾವು ಕೇಳಿ ಏನು ಪ್ರಯೋಜನ ಹಾಗಾದರೆ ಏತಕ್ಕೋಸ್ಕರ ಕೇಳಬೇಕು?

ಅಧ್ಯಕ್ಷರು: ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ ಮೇಲೆ, ಮಂತ್ರಿಗಳು ಪರಿಶೀಲನೆ ಮಾಡುತ್ತೇನೆಂದು ಹೇಳಲಿಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಎಷ್ಟು ದಿವಸದಲ್ಲಿ ಮಾಡುತ್ತೀರಿ? ಇಲಾಖೆಯವರು ಏನೇನು ಮಾಡಿದ್ದಾರೆನ್ನುವುದನ್ನು ಹೇಳದೆ ಬಿಟ್ಟುಬಿಡುವುದಕ್ಕಾಗುತ್ತದೆಯೆ?

ಅಧ್ಯಕ್ಷರು: ಶೀಘ್ರವಾಗಿ ಅಂದರೆ, ಅತೀ ಶೀಘ್ರವಾಗಿ ಎಂದು ಮಾನ್ಯ ಮಂತ್ರಿಗಳು ಈ ಬಗ್ಗೆ ಬಿಗಿ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೆ, ಅವರು ಯಾರೇ ಆಗಿರಲಿ ನಿಯಮವನ್ನು ಮೀರಿ ಒತ್ತುವರಿ ಮಾಡಿದ್ದರೆ ಅದನ್ನು ತೆರವು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಇದಕ್ಕಿಂತ ಇನ್ನೇನು ಹೇಳಲಿ?

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ ಒಂದು ನಿಮಿಷ. ಇದೇ ಸರ್ವೆ ನಂಬರ್ 61ರಲ್ಲಿ ಗಂಡ ಇಲ್ಲದ ಒಬ್ಬ ವಿಧವೆ ರಾಜಮ್ಮ ಎಂಬುವರು 3ಎಕರೆ ಭೂಮಿಯನ್ನು ಉಳುಮೆ ಮಾಡಿಕೊಂಡಿದ್ದಾರೆ. ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಶಾಂತಪ್ಪ ಮತ್ತು ವಿಜಯಲಕ್ಷ್ಮಿ ಎಂಬುವವರಿಗೆ ಮಂಜೂರು ಮಾಡಿದ್ದಾರೆ. ಅಸಿಸ್ಟೆಂಟ್ ಕಮೀಷನರ್ ಮಂಜೂರಾತಿಯನ್ನು ವಜಾ ಮಾಡಿದ್ದರು. ಮತ್ತೆ ಅಧಿಕಾರ ದುರುಪಯೋಗ ಮಾಡಿಕೊಂಡು ಜಿಲ್ಲಾಧಿಕಾರಿಗಳು ಅಸಿಸ್ಟೆಂಟ್ ಕಮಿಷನರ್ ಆದೇಶಕ್ಕೆ ತಡೆಯಾಜ್ಞೆ ಕೊಟ್ಟು ಒಂದೂವರೆ ವರ್ಷಗಳಾಯಿತು. ಇದುವರೆಗೆ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿಲ್ಲ. ಈ ರೀತಿ ಅಧಿಕಾರ ದುರುಪಯೋಗ ಮಾಡತಕ್ಕವರಿಗೆ ಸಹಕಾರ ಕೊಟ್ಟುಕೊಂಡು ಬಂದಿದ್ದಾರೆ. ಕೆಲವು ಸಂದರ್ಭಗಳಲ್ಲಿ ಒಂದೆರಡು ಗುಂಟೆ ಜಮೀನು ಒತ್ತುವರಿ ಮಾಡಿರತಕ್ಕ ರೈತರಿಗೆ ಯಾವರೀತಿ ಮಾನಸಿಕ ಹಿಂಸೆಯನ್ನು ಕೊಡುತ್ತಾರೆನ್ನುವುದು ಗೊತ್ತಿದೆ. ದಯಮಾಡಿ ಸಚಿವರು ಒತ್ತುವರಿ ಮಾಡಿರುವವರನ್ನು ಖಾಲಿ ಮಾಡಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲಿ ಕಾರ್ಮಿಕ ಸಚಿವರು ಇದ್ದಾರೆ, ಅವರು ಡಿಪ್ಪಿಲರಿಯನ್ನು ಮಾಡುವುದಕ್ಕೆ ಹೊರಟಿದ್ದಾರೆ. ಆ ಜಮೀನು ಸ್ವಂತವೇ, ಅಲ್ಲವೇ ಎಂಬುದರ ಬಗ್ಗೆ ಸರ್ವೆ ಮಾಡಿಸಬೇಕು. ಈ ಬಗ್ಗೆ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ:ಮಾನ್ಯ ಅಧ್ಯಕ್ಷರೆ, ಶೀಘ್ರವಾಗಿ ಅಳತೆ ಮಾಡಿಸಿ ಈ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.